# ಬಡ್ಡಿ ದರ ಮಾದರಿ ನೀತಿ

2022

ಉದ್ಯಮದಾದ್ಯಂತ ಅನ್ವಯ

ಈ ದಾಖಲೆಯು ಬಡ್ಡಿ ದರ ಮಾದರಿಗೆ ಮಾನದಂಡವಾಗಿ ವರ್ತಿಸುತ್ತದೆ

ಆಕ್ಸಿಯೊ ಇದು ಆರ್‌ಬಿಐದೊಂದಿಗೆ ನೋಂದಾಯಿಸಲ್ಪಟ್ಟಿರುವ ಒಂದು ಎನ್‌ಬಿಎಫ್‌ಸಿ ಆಗಿರುವ ಕ್ಯಾಪ್‌ಫ್ಲೋಟ್ ಫಿನಾನ್ಷಿಯಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್‌ನ ಬ್ರ್ಯಾಂಡ್ ಹೆಸರಾಗಿದೆ

# ಪರಿವಿಡಿ


| ವಿಷಯ | ಪುಟಗಳು |
|---|---|
| I. ಸಾಲಗಳಿಗೆ ಬಡ್ಡಿ ದರವನ್ನು ನಿರ್ಧರಿಸುವ ತತ್ವಗಳು | 3-6 |
| II. ಬಡ್ಡಿಯ ದರ | 6 |
| III. ಬ್ಯಾಂಕಿಂಗ್ ಮತ್ತು ಆರ್ಥಿಕ ಸಮಿತಿ | 6-7 |
| IV. ನೀತಿಯ ಪುನರಾವಲೋಕನ | 7 |

ಪ್ರತಿ ಎನ್‌ಬಿಎಫ್‌ಸಿಯ ಆಡಳಿತ ಮಂಡಳಿಯು ನಿಧಿಗಳ ವೆಚ್ಚ, ಲಾಭಾಂಶ ಮತ್ತು ಅಪಾಯ ಪ್ರೀಮಿಯಮ್ ಮುಂತಾದವುಗಳಂಥ ಸಂಬಂಧಿತ ಅಂಶಗಳನ್ನು ಪರಿಗಣಿಸುತ್ತಾ, ಆ ಕಂಪನಿಗೆ ಬಡ್ಡಿ ದರ ಮಾದರಿಯೊಂದನ್ನು ಅನುಮೋದಿಸಿ, ಸಾಲಗಳು ಹಾಗೂ ಮುಂಗಡಗಳಿಗೆ ಆಕರಿಸಲಾಗುವ ಬಡ್ಡಿಯ ದರವನ್ನು ನಿರ್ಧರಿಸತಕ್ಕದ್ದು ಎಂದು ಜನವರಿ 2, 2009 ರ ದಿನಾಂಕದ ತನ್ನ ಅಧಿಸೂಚನೆ ಸಂ. DNBS. 204 / CGM (ASR) -2009 ರ ಮೂಲಕ ಭಾರತೀಯ ರಿಜರ್ವ್ ಬ್ಯಾಂಕ್ ನಿರ್ದೇಶಿಸಿದೆ.

ಮುಂದುವರೆದು, ಈ ನಿರ್ದೇಶನವು ಹೀಗೆ ಹೇಳುತ್ತದೆ:

- ಬಡ್ಡಿಯ ದರ ಮತ್ತು ಅಪಾಯದ ವರ್ಗೀಕರಣದ ವಿಧಾನ ಮತ್ತು ಬೇರೆಬೇರೆ ವರ್ಗದ ಸಾಲ ಪಡೆದುಕೊಳ್ಳುಗರಿಗೆ ಬೇರೆಬೇರೆ ಬಡ್ಡಿಯ ದರಗಳನ್ನು ಆಕರಿಸುವುದಕ್ಕಾಗಿನ ತಾರ್ಕಿಕತೆ ಇವುಗಳನ್ನು ಸಾಲ ಪಡೆದುಕೊಳ್ಳುಗರು/ಗ್ರಾಹಕರಿಗೆ ನೀಡಲಾಗುವ ಮಂಜೂರಾತಿ ಪತ್ರದಲ್ಲಿ ಅವರಿಗೆ ಸಂವಹನ ಮಾಡತಕ್ಕದ್ದು.
- ಗ್ರಾಹಕರಿಂದ ಆಕರಿಸಲಾಗುವ ಸಾಲ ನೀಡಿಕೆ ದರಗಳ ತರ್ಕ ಹಾಗೂ ವಿಧಾನವು ಅವರಿಗೆ ತಿಳಿದುಬರುವಂತೆ ಮಾಡುವುದಕ್ಕಾಗಿ ಈ ಬಡ್ಡಿ ದರ ಮಾದರಿಯನ್ನು ಕಂಪನಿಯ ವೆಬ್‌ಸೈಟಿನಲ್ಲಿಯೂ ಸಹ ಲಭ್ಯವಾಗಿಸಬೇಕಾಗುತ್ತದೆ.

ಸದರಿ ಆರ್‌ಬಿಐ ನಿರ್ದೇಶನಗಳ ಅನುಸರಣೆಯಲ್ಲಿ, ಕಂಪನಿಗಾಗಿನ ಬಡ್ಡಿ ದರ ಮಾದರಿಯನ್ನು ಈಕೆಳಗೆ ನೀಡಲಾಗಿದೆ:

## ಸಾಲಗಳಿಗೆ ಬಡ್ಡಿ ದರವನ್ನು ನಿರ್ಧರಿಸುವ ತತ್ವಗಳು:

- ಇತರ ವಿಷಯಗಳ ನಡುವೆಯೇ ಕ್ಯಾಪ್‌ಫ್ಲೋಟ್ ಫಿನಾನ್ಷಿಯಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ನಿಧಿಗಳ ಸಮತೂಗಿತ ಸರಾಸರಿ ವೆಚ್ಚ (ವೇಟೆಡ್ ಅವರೇಜ್ ಕಾಸ್ಟ್ ಆಫ್ ಫಂಡ್ಸ್), ಹಂಚಿಕೆ ಮಾಡಲಾಗದ ಮೇಲುವೆಚ್ಚಗಳು (ಅನ್-ಅಲೋಕೇಬಲ್ ಓವರ್‌ಹೆಡ್ಸ್) ಮತ್ತು ಇತರ ಆಡಳಿತಾತ್ಮಕ ವೆಚ್ಚಗಳು ಇವುಗಳನ್ನು ಪರಿಗಣಿಸುತ್ತಾ ಬಡ್ಡಿ ದರಗಳನ್ನು ನಿರ್ಧರಿಸಲು ಕ್ಯಾಪ್‌ಫ್ಲೋಟ್ ಫಿನಾನ್ಷಿಯಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ತನ್ನ ಮಾದರಿಯನ್ನು ಹೊಂದಿದ್ದು, ಎಎಲ್‌ಎಮ್ ಮಿಸ್‌ಮ್ಯಾಚ್‌ಗಾಗಿ ಮುಂದುವರೆದು ಅದನ್ನು ಹೊಂದಾಣಿಕೆ ಮಾಡಲಾಗಿದೆ. ಬ್ಯಾಂಕ್, ಎನ್‌ಬಿಎಫ್‌ಸಿ ಲೈನ್‌ಗಳು, ಪರಿವರ್ತಿಸಲಾಗದ ಡಿಬೆಂಚರ್‌ಗಳು ಮುಂತಾದವುಗಳಂಥ ಹಲವಾರು ಮೂಲಗಳಿಂದ ಮಾಸಾಂತ್ಯದ ಸಮಯದಲ್ಲಿನ ಕ್ಯಾಪ್‌ಫ್ಲೋಟ್ ಫಿನಾನ್ಷಿಯಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್‌ನ ಒಟ್ಟೂ ಸಾಲ ಪಡೆದುಕೊಳ್ಳುವಿಕೆಗಳ ವೆಚ್ಚವನ್ನು ಪರಿಗಣಿಸುತ್ತಾ ನಿಧಿಗಳ ಸಮತೂಗಿತ ಸರಾಸರಿ ವೆಚ್ಚವನ್ನು ಲೆಕ್ಕ ಮಾಡಲಾಗುತ್ತದೆ.

- ಸದರಿ ದರವು ಬ್ಯಾಂಕಿಂಗ್ ಮತ್ತು ಆರ್ಥಿಕ ಸಮಿತಿಯ ಸಭೆಯಲ್ಲಿ ಪುನರಾವಲೋಕಿಸಲ್ಪಡುತ್ತದೆ.

- ಹಲವಾರು ವ್ಯವಹಾರ ವಿಭಾಗಗಳು ಮತ್ತು ಅವುಗಳಡಿಯ ಹಲವಾರು ಯೋಜನೆಗಳಿಗಾಗಿನ ಸಾಲಗಳಿಗೆ ಬಡ್ಡಿ ದರವನ್ನು ಕ್ಯಾಪ್‌ಫ್ಲೋಟ್ ಫಿನಾನ್ಷಿಯಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಬಡ್ಡಿ ದರ ಮಾದರಿ, ಸಂಬಂಧಿತ ವ್ಯವಹಾರ ವಿಭಾಗಕ್ಕಾಗಿನ ಅಪಾಯ ಮತ್ತು ಅವಧಿ ಪ್ರೀಮಿಯಮ್ ಲೆಕ್ಕದಲ್ಲಿನ ವೆಚ್ಚ, ವ್ಯವಹಾರ-ನಿರ್ದಿಷ್ಟ ಕಾರ್ಯಾಚರಣಾ ವೆಚ್ಚ ಇವುಗಳ ಮೂಲಕ ನಿರ್ಧರಿಸಿ, ಸಾಲ ನೀಡಿಕೆ ದರವನ್ನು ತಲುಪಲು ಲಾಭಾಂಶವನ್ನು ಸೇರಿಸಲಾಗುತ್ತದೆ.

- ಈ ಕೆಳಗಿನ ಮಾನದಂಡಗಳನ್ನು ಪರಿಗಣಿಸಿದ ನಂತರ ಕ್ಯಾಪ್‌ಫ್ಲೋಟ್ ಫಿನಾನ್ಷಿಯಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್‌ದಿಂದ ಒದಗಿಸಲ್ಪಡುವ ಹಲವಾರು ಉತ್ಪನ್ನಗಳಿಗಾಗಿನ ಅಂತಿಮ ಸಾಲ ನೀಡಿಕೆ ದರವನ್ನು ತಲುಪಲಾಗುತ್ತದೆ: ಮಾರುಕಟ್ಟೆ ಪ್ರತಿಷ್ಠೆ, ಬಡ್ಡಿ, ಸಂಬಂಧಿತ ವ್ಯವಹಾರ ವಿಭಾಗದಲ್ಲಿನ ಸಾಲ ಮತ್ತು ಸುಸ್ತಿ ಅಪಾಯ, ಅದೇ ರೀತಿಯ ಏಕರೂಪ ಕಕ್ಷಿದಾರರ ಐತಿಹಾಸಿಕ ಕಾರ್ಯಪ್ರದರ್ಶನ, ಓರ್ವ ಹಾಲಿ ಗ್ರಾಹಕರಾಗಿದ್ದಲ್ಲಿ ಸಾಲ ಪಡೆದುಕೊಳ್ಳುಗರ ವ್ಯಕ್ತಿಚಿತ್ರಣ, ಸಾಲ ಪಡೆದುಕೊಳ್ಳುಗರೊಂದಿಗಿನ ಸಂಬಂಧದ ಅವಧಿ, ಸಾಲ ಪಡೆದುಕೊಳ್ಳುಗರ ಮರುಪಾವತಿ ಇತಿಹಾಸ, ಲಭ್ಯವಿರುವ ದ್ರವ್ಯಸಹಾಯ, ಅನುಮತಿಸಲ್ಪಟ್ಟಿರುವ ವಿಚಲನೆಗಳು, ಭವಿಷ್ಯದಲ್ಲಿನ ಸಾಮರ್ಥ್ಯ, ಸಮೂಹ ಬಲ, ಒಟ್ಟಾರೆ ಗ್ರಾಹಕ ಹುಟ್ಟುವಳಿ, ಪ್ರಾಥಮಿಕ ಮತ್ತು ಮೇಲಾಧಾರ ಭದ್ರತೆಯ ಸ್ವರೂಪ ಮತ್ತು ಮೌಲ್ಯ ಮುಂತಾದವುಗಳು. ಇಂಥ ಮಾಹಿತಿಯು ಸಾಲ ಪಡೆದುಕೊಳ್ಳುಗರು, ಕ್ರೆಡಿಟ್ ರಿಪೋರ್ಟ್‌ಗಳು, ಮಾರುಕಟ್ಟೆ ಗುಪ್ತಚರ ವಿಭಾಗದಿಂದ ಒದಗಿಸಲ್ಪಡುವ ಮಾಹಿತಿ ಮತ್ತು ಸಾಲ ಪಡೆದುಕೊಳ್ಳುಗರ ಆವರಣದ ಕ್ಷೇತ್ರ ತಪಾಸಣೆಯಿಂದ ಕಲೆ ಹಾಕಿದ ಮಾಹಿತಿ ಇವುಗಳ ಮೇಲೆ ಆಧರಿತವಾಗಿ ಕಲೆ ಹಾಕಲ್ಪಡುತ್ತದೆ.

- ಬೇರೆಬೇರೆ ಗ್ರಾಹಕರಿಂದ ಅದೇ ಅವಧಿಯ ಸಂದರ್ಭದಲ್ಲಿ ಪಡೆದುಕೊಂಡ ಅದೇ ಉತ್ಪನ್ನ ಮತ್ತು ಅವಧಿಗಾಗಿನ ಬಡ್ಡಿಯ ದರವನ್ನು ಮಾನಕಗೊಳಿಸಬೇಕಿರುವುದಿಲ್ಲ. ಈ ಮೇಲಿನ ಯಾವುದೇ ಅಂಶ ಅಥವಾ ಅವುಗಳ ಸಂಯೋಜನೆಯ ಪರಿಗಣಿಸುವಿಕೆಯ ಮೇಲೆ ಆಧರಿತವಾಗಿ ಬೇರೆಬೇರೆ ಗ್ರಾಹಕರಿಗೆ ಅದು ಏರಿಳಿತಗೊಳ್ಳಬಹುದು.

- ಬಳಕೆದಾರ ಸಾಲಗಳಿಗೆ ವೆಚ್ಚವಿಲ್ಲದ ಇಎಮ್‌ಐ, ಬಡ್ಡಿ ದರವು ಗ್ರಾಹಕರಿಂದ ಭರಿಸಲ್ಪಡುವುದಿಲ್ಲ, ಬಡ್ಡಿಯು ಸಹಾಯದ್ರವ್ಯದ ರೂಪದಲ್ಲಿ ವ್ಯಾಪಾರಿಯಿಂದ ಪಾವತಿಸಲ್ಪಡುತ್ತದೆ. ರಿಯಾಯತಿಯನ್ನು ಮುಂಗಡವಾಗಿಯೇ/ತಕ್ಷಣವೇ ಒದಗಿಸಲ್ಪಡುವಂಥ ಉತ್ಪನ್ನಗಳು ಇವೆ. ಈ ಉತ್ಪನ್ನಗಳ ಮೇಲೆ ಗ್ರಾಹಕರು ಬಡ್ಡಿಯನ್ನು ಪಾವತಿಸುತ್ತಾರಾದರೂ ಒಟ್ಟಾರೆ ಅಸಲು ಹಾಗೂ ಬಡ್ಡಿಯು ಆ ಉತ್ಪನ್ನದ ಮೂಲ ವೆಚ್ಚಕ್ಕೆ

ಸಮನಾಗಿರುತ್ತದೆ. ಇದು ಪರಿಣಾಮಕಾರಿಯಾಗಿ ಮೂಲ ಬೆಲೆಗೆ ಯಾವುದೇ ಹೆಚ್ಚುವರಿ ವೆಚ್ಚವಿಲ್ಲದೇ ಉತ್ಪನ್ನವನ್ನು ಗ್ರಾಹಕರಿಗೆ ನೀಡುತ್ತದೆ.

- ಬಡ್ಡಿ ದರಗಳನ್ನು ಒಂದು ನಿಶ್ಚಿತ ಅಥವಾ ಏರಿಳಿತಗೊಳ್ಳುವ ಆಧಾರದಲ್ಲಿ ಒದಗಿಸಬಹುದು ಹಾಗೂ ಸಮಾನ ಅಥವಾ ಕ್ಷೀಣಿಸುವ ಮೊತ್ತದ ವಿಧಾನದ ಮೇಲೆ ಆಕರಿಸಬಹುದು.

- ಈ ಮೇಲಿನದ್ದಕ್ಕಾಗಿ, ಬಡ್ಡಿ ಶ್ರೇಣಿಯು ವಾರ್ಷಿಕ ಆಧಾರದ ಮೇಲೆ ಕ್ಷೀಣಿಸುವ ಮೊತ್ತದ ದರದಲ್ಲಿ 14 ಹಾಗೂ 36% ನಡುವೆ ಏರಿಳಿತಗೊಳ್ಳಬಹುದು.

- ಬೇರೆಬೇರೆ ಉತ್ಪನ್ನಗಳು/ವಿಭಾಗಗಳಿಗೆ ಬಡ್ಡಿಯನ್ನು ಮಾಸಿಕ ಅಥವಾ ತ್ರೈಮಾಸಿಕ ದರಗಳಲ್ಲಿ ಆಕರಿಸಬಹುದು, ಇದನ್ನು ಭವಿಷ್ಯಾರ್ಥಿ ಗ್ರಾಹಕರಿಗೆ ಮಾಡಲಾಗುತ್ತದೆ ಹಾಗೂ ತದನಂತರದ ನೀತಿಯಲ್ಲಿ ದಾಖಲಿಸಲಾಗುತ್ತದೆ.

- ಬಡ್ಡಿ ದರಗಳು/ಬಡ್ಡಿ ವಿಧವನ್ನು ಗ್ರಾಹಕರಿಗೆ ಆ ಸಾಲದ ಮಂಜೂರಾತಿಯ/ಸಾಲವನ್ನು ಪಡೆದುಕೊಳ್ಳುವ ಸಮಯದಲ್ಲಿ ತಿಳಿಸಲಾಗುತ್ತದೆ ಹಾಗೂ ಬಡ್ಡಿ ಮತ್ತು ಅಸಲಿನ ಬಾಕಿಗಳೆಡೆಗಿನ ಇಎಮ್ಐ ಪಾಲು ಮಾಡುವಿಕೆಯನ್ನು ಗ್ರಾಹಕರಿಗೆ ಲಭ್ಯವಾಗಿಸಲಾಗುತ್ತದೆ.

- ಬಡ್ಡಿಯನ್ನು, ಸಂವಹನ ಮಾಡಿದಂತೆ ಕೊನೆಯ ದಿನಾಂಕದಂದು ತಕ್ಷಣ ಪಾವತಿಸತಕ್ಕದ್ದು ಎಂದು ಪರಿಗಣಿಸಲಾಗುತ್ತದೆ ಹಾಗೂ ಬಡ್ಡಿಯ ಪಾವತಿಗಾಗಿ ಯಾವುದೇ ಕೃಪಾ ಅವಧಿಯನ್ನು ಅನುಮತಿಸಲಾಗುವುದಿಲ್ಲ.

- ಸಾಧಾರಣ ಬಡ್ಡಿಯಲ್ಲದೇ, ಯಾವುದೇ ಬಾಕಿಗಳ ಪಾವತಿಯನ್ನು ಮಾಡುವಲ್ಲಿನ ವಿಳಂಬ ಅಥವಾ ಸುಸ್ತಿಗಾಗಿ ಹೆಚ್ಚುವರಿ/ದಂಡನೀಯ ಬಡ್ಡಿಯನ್ನು ಕಂಪನಿಯು ವಿಧಿಸಬಹುದು. ಬೇರೆಬೇರೆ ಉತ್ಪನ್ನಗಳು ಅಥವಾ ಸೌಕರ್ಯಗಳಿಗಾಗಿನ ಈ ಹೆಚ್ಚುವರಿ ಅಥವಾ ದಂಡನೀಯ ಬಡ್ಡಿಗಳು ಆಯಾ ವ್ಯವಹಾರ/ಉತ್ಪನ್ನ ಶೀರ್ಷಿಕೆಗಳಿಂದ ನಿರ್ಧರಿಸಲ್ಪಡುತ್ತವೆ.

- ಬಡ್ಡಿ ದರಗಳು ಮತ್ತು ಆಕರಿಸುವಿಕೆಗಳಲ್ಲಿನ ಬದಲಾವಣೆಗಳು ಭವಿಷ್ಯಾರ್ಥಿಯಾಗಿ ಜಾರಿಗೆ ಬರುತ್ತವೆ ಹಾಗೂ ಬಡ್ಡಿ ಅಥವಾ ಇತರ ಶುಲ್ಕಗಳ ಬದಲಾವಣೆಯ ಸೂಚನೆಯನ್ನು ಸೂಕ್ತ ಎಂದು ಪರಿಗಣಿಸಲ್ಪಡುವ ವಿಧಾನ ಮತ್ತು ರೀತಿಯಲ್ಲಿ ಗ್ರಾಹಕರಿಗೆ ಸಂವಹನ ಮಾಡಲಾಗುತ್ತದೆ.

- ಬಡ್ಡಿಯಲ್ಲದೇ, ಸಂಸ್ಕರಣಾ ಶುಲ್ಕಗಳು, ಸೃಷ್ಟಿ ಶುಲ್ಕಗಳು (ಒರಿಜಿನೇಶನ್ ಫೀಜ್), ಚೆಕ್ ಬೌನ್ಸಿಂಗ್ ಶುಲ್ಕಗಳು, ತಡ ಪಾವತಿ ಶುಲ್ಕಗಳು, ಮರು-ಅನುಸೂಚಿತಗೊಳಿಸುವ ಶುಲ್ಕಗಳು, ಪೂರ್ವ-ಪಾವತಿ / ಮುಂದಾಗಿ ಮುಕ್ತಾಯಗೊಳಿಸುವಿಕೆ ಶುಲ್ಕಗಳು, ಭಾಗ ವಿತರಣಾ ಶುಲ್ಕಗಳು, ಚೆಕ್ ಅದಲುಬದಲು ಶುಲ್ಕಗಳು, ಭದ್ರತಾ ಅದಲುಬದಲು ಶುಲ್ಕಗಳು, ಖಾತೆ ವಿವರಣೆಯ ನೀಡಿಕೆಗಾಗಿನ ಶುಲ್ಕಗಳು ಮುಂತಾದವುಗಳಂಥ ಇತರ ಆರ್ಥಿಕ ಆಕರಿಸುವಿಕೆಗಳನ್ನು ಅವಶ್ಯಕ ಎಂದು ಪರಿಗಣಿಸಲ್ಪಡುವಲ್ಲೆಲ್ಲ ಕಂಪನಿಯಿಂದ ವಿಧಿಸಲಾಗುತ್ತದೆ. ಈ ಶುಲ್ಕಗಳ ಹೊರತಾಗಿ, ಒದಗಿಸಲಾಗುವ ದಾಖಲೆಯಲ್ಲಿ ಸಂವಹನ ಮಾಡಲಾದಂತೆ ಕಾಲಕಾಲಕ್ಕೆ ಅನ್ವಯವಾಗುವ ದರಗಳಲ್ಲಿ ಮುದ್ರಾಂಕ ಶುಲ್ಕ, ಸೇವಾ ತೆರಿಗೆ ಮತ್ತು ಇತರ ಕರಗಳನ್ನು ಸಂಗ್ರಹಿಸಲಾಗುತ್ತದೆ. ಈ ಶುಲ್ಕಗಳಲ್ಲಿನ ಯಾವುದೇ ಪರಿಷ್ಕರಣೆಯು ಭವಿಷ್ಯಾರ್ಥಿಯಾಗಿ ಜಾರಿಗೆ ಬರುತ್ತದೆ ಹಾಗೂ ಸಾಲ ಪಡೆದುಕೊಳ್ಳುಗರಿಗೆ ತಿಳಿಸಲ್ಪಡುತ್ತದೆ.

- ಈ ಶುಲ್ಕಗಳನ್ನು ನಿರ್ಧರಿಸುವಾಗ, ಮಾರುಕಟ್ಟೆಯಲ್ಲಿನ ಪ್ರತಿಸ್ಪರ್ಧಿಗಳಿಂದ ಅನುಸರಿಸಲಾಗುವ ಕ್ರಮವಿಧಾನಗಳನ್ನೂ ಸಹ ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ.

- ಶುಲ್ಕಗಳು / ದಂಡನೀಯ ಬಡ್ಡಿ / ಹೆಚ್ಚುವರಿ ಬಡ್ಡಿಯ ಮರುಸಂದಾಯ ಅಥವಾ ಮನ್ನಿಸುವಿಕೆಗಾಗಿನ ದಾವೆಗಳನ್ನು ಸಾಮಾನ್ಯವಾಗಿ ಕಂಪನಿಯು ಪರಿಗಣಿಸುವುದಿಲ್ಲ ಹಾಗೂ ಇಂಥ ಕೋರಿಕೆಗಳೊಂದಿಗೆ ವ್ಯವಹರಿಸುವುದು ಕಂಪನಿಯ ಏಕಮಾತ್ರ ವಿವೇಚನೆಗೆ ಬಿಟ್ಟ ವಿಚಾರವಾಗಿರುತ್ತದೆ.

## ಬಡ್ಡಿ ದರ :

- ಸಾಲದ ಮಂಜೂರಾತಿಯ ಸಮಯದಲ್ಲಿ ಕಂಪನಿಯು ಇವುಗಳನ್ನು ಸಾಲ ಪಡೆದುಕೊಳ್ಳುಗರಿಗೆ ತಿಳಿಸುತ್ತದೆ: ಸಾಲದ ಮೊತ್ತ, ಬಡ್ಡಿಯ ವಾರ್ಷೀಕರಿಸಿದ ದರ, ಅವಧಿ, ಈಕ್ವೇಟೆಡ್ ಮಂತ್ಲೀ ಇನ್‌ಸ್ಟಾಲ್‌ಮೆಂಟ್‌ಗಳ ಮೊತ್ತ.

## ಬ್ಯಾಂಕಿಂಗ್ ಮತ್ತು ಆರ್ಥಿಕ ಸಮಿತಿ :

- ಬಡ್ಡಿಯ ದರಗಳು ಆಗಾಗ್ಗೆ ಪುನರಾವಲೋಕಿಸಲ್ಪಡುತ್ತವೆ ಹಾಗೂ ಈ ನೀತಿಯಲ್ಲಿನ ಯಾವುದೇ ಪರಿಷ್ಕರಣೆಯು ಬ್ಯಾಂಕಿಂಗ್ ಮತ್ತು ಆರ್ಥಿಕ ಸಮಿತಿಯಿಂದ ನಿರ್ಧರಿಸಲ್ಪಡುತ್ತದೆ ಹಾಗೂ, ತದನಂತರದಲ್ಲಿ, ಕಂಪನಿಯ ನಿರ್ದೇಶಕ ಮಂಡಳಿಯ ಅನುಮೋದನೆಗಾಗಿ ಅದರ ಮುಂದೆ ಪ್ರಸ್ತುತಪಡಿಸಲ್ಪಡುತ್ತದೆ.

- ಬಡ್ಡಿ ದರವನ್ನು ಬಾಧಿಸುವ ಹಲವಾರು ಅಂಶಗಳೊಂದಿಗಿನ ಹೊಂದಾಣಿಕೆಯಲ್ಲಿ ಹಲವಾರು ಉತ್ಪನ್ನಗಳಿಗೆ ಬಡ್ಡಿ ದರವನ್ನು ಲೆಕ್ಕ ಮಾಡುವ ಯಾಂತ್ರಿಕತೆಯನ್ನು ವ್ಯಾಖ್ಯಾನಿಸುವ ಬಡ್ಡಿ ದರ ಪ್ರೀಮಿಯ್ ಮೇಲಿನ ಒಂದು ಟಿಪ್ಪಣಿ

ಹಾಗೂ ಪುನರಾವಲೋಕನ ಮತ್ತು ಅನುಮೋದನೆಗಾಗಿ ಅರ್ಧ-ವಾರ್ಷಿಕ ಮಧ್ಯಂತರಗಳಲ್ಲಿ ಆಡಳಿತ ಮಂಡಳಿಗೆ ಅದನ್ನು ಸಲ್ಲಿಸಲಾಗುತ್ತದೆ.

- ಉತ್ಪನ್ನ-ವಾರು ಕನಿಷ್ಠ ಮತ್ತು ಗರಿಷ್ಠ ಬಡ್ಡಿ ಶ್ರೇಣಿಗಳನ್ನು ಒಳಗೊಳ್ಳುವ ಬಡ್ಡಿ ದರದ ಶ್ರೇಣಿಗಳ ಮೇಲಿನ ಒಂದು ಟಿಪ್ಪಣಿ ಹಾಗೂ ಪುನರಾವಲೋಕನ ಮತ್ತು ಅನುಮೋದನೆಗಾಗಿ ತ್ರೈಮಾಸಿಕ ಮಧ್ಯಂತರಗಳಲ್ಲಿ ಆಡಳಿತ ಮಂಡಳಿಗೆ ಅದನ್ನು ಸಲ್ಲಿಸಲಾಗುತ್ತದೆ.

ಉತ್ಪನ್ನ-ವಾರು / ಉಪ - ಉತ್ಪನ್ನ-ವಾರು ಬಡ್ಡಿ ದರ ಶ್ರೇಣಿಗಳು ಈ ಕೆಳಗಿನಂತಿವೆ:

| ಉತ್ಪನ್ನ | ಕನಿಷ್ಠ ಬಡ್ಡಿ ದರ % | ಗರಿಷ್ಠ ಬಡ್ಡಿ ದರ % |
|---|---|---|
| ಭದ್ರತೆ ಪಡೆದುಕೊಳ್ಳದ ವ್ಯವಹಾರ ಸಾಲಗಳು | 17 | 24 |
| ಎಲ್‌ಟಿಯುಬಿಎಲ್ (ಯುಬಿಎಲ್ 3) (ಸ್ಥಿರ ದರ) | 14 | 17.5 |
| ಬ್ಯಾಂಕಿಂಗ್ ಸರೊಗೇಟ್ (ಯುಬಿಎಲ್2) | 20 | 26 |
| ಕನ್ಸ್ಯೂಮರ್ ಫಿನಾನ್ಸ್ (ಆನ್‌ಲೈನ್ ಚೆಕ್‌ಔಟ್ ಸೇರಿದಂತೆ) | ಪಾಲುದಾರರಿಂದ ಸಹಾಯದ್ರವ್ಯ ಒದಗಿಸಲ್ಪಟ್ಟ | 24 |
| ವೈಯಕ್ತಿಕ ಸಾಲಗಳು – ವೇತನದಾರರು | 18 | 36 |
| ವೈಯಕ್ತಿಕ ಸಾಲಗಳು – ಸ್ವ-ಉದ್ಯೋಗಿಗಳು | 21.5 | 36 |

- ಪ್ರತಿ ಉತ್ಪನ್ನವೂ, ಬೇರೆಬೇರೆ ಅಪಾಯ ವಲಯಗಳೆಡೆಗೆ ಉದ್ದೇಶಿಸಲಾಗಿರುವ ಹಲವಾರು ಉಪ-ಉತ್ಪನ್ನಗಳನ್ನು ಒಳಗೊಳ್ಳುತ್ತದೆ. ಈ ಪ್ರತಿಯೊಂದು ಉಪ-ಉತ್ಪನ್ನಗಳಿಗಾಗಿನ ಬಡ್ಡಿ ಶ್ರೇಣಿಯು, ಗ್ರಾಹಕರ ಅಪಾಯ ಚಿತ್ರಣದ ಮೇಲೆ ಅವಲಂಬಿತವಾಗಿ ಶ್ರೇಣಿಯೊಂದನ್ನು ಹೊಂದಿರುತ್ತದೆ.

- ನಿಧಿಗಳ ವೆಚ್ಚದಂಥ ಹಲವಾರು ಅಂಶಗಳ ಮೇಲೆ ಆಧರಿತವಾಗಿ ವಿಶಾಲವಾದ ಬಡ್ಡಿ ದರ ಶ್ರೇಣಿಗಳನ್ನು ಎಎಲ್‌ಸಿಒ (ಅಸೆಟ್ ಲಯೇಬಿಲಿಟಿ ಕಮಿಟಿ) ಸಭೆಯು ಆಗಾಗ್ಗೆ ನಿರ್ಧರಿಸುತ್ತದೆ ಎಂಬುದನ್ನು ದಯವಿಟ್ಟು ಗಮನಿಸಿ.

## ನೀತಿಯ ಪುನರಾವಲೋಕನ :

- ಈ ನೀತಿಯು ವಾರ್ಷಿಕ ಮಧ್ಯಂತರಗಳಲ್ಲಿ ಅಥವಾ ಕಂಪನಿಯ ನಿರ್ದೇಶಕ ಮಂಡಳಿಯಿಂದ ಅವಶ್ಯಕ ಎಂದು ಪರಿಗಣಿಸಲ್ಪಟ್ಟಾಗಲೆಲ್ಲ ಪುನರಾವಲೋಕಿಸಲ್ಪಡುತ್ತದೆ.